

ಆಕಾಶದಲ್ಲಿ ಗುಡುಗು ಸಿಡಿಲು ಛಟೀರ್ ಎಂದು ಹೊಡೆಯಲು ಅವನಿಗೆ ತಡೆಯಲಾಗಲಿಲ್ಲ. ಎದ್ದು ಹೊರಟ. ಮೈ ತುಂಬ ಹುಚ್ಚು ಚೇತನ ಚಿಮ್ಮಿತ್ತು. ಆ ಅಳಲ ಹುಡುಗಿಯ ಅಳಲು ನನಗೆ ಒಂದು ಹೂ ನಗೆಯಾಗಿ ಕಾಣಬೇಕು. ಅಲ್ಲಿ ತನಕ ಬಿಡೆನು ಎಂದು ಮಾಯವಾದ.

ಬಿರುಗಾಳಿ ಎದ್ದಿತು. ದಿಗಂತಗಳಲ್ಲಿ ಮಿಂಚು ಗುಡುಗು ತಾಳ ಮೇಳವಾಗಿದ್ದವು. ಸಾಗರದ ಆಚೆ ಆಚೆಗೆ ಬಂದ. ಹಾಗೆ ಒಂಟಿಯಾಗಿ ಮಿಂಚು ಗುಡುಗು ಚಳಿಯಲ್ಲಿ ಮೀಯುವುದು ದುಃಖವನ್ನು ಮಳೆಯಲ್ಲಿ ತೊಳೆದುಕೊಂಡಂತಾಗುತ್ತಿತ್ತು. ತರಾವರಿ ತಂತಿ ಬೇಲಿಗಳ ದಾಟಲಾಗದೆ; ಈ ಬಿರು ಮಳೆಯಲ್ಲಿ ಆ ಹೆಂಗಸಿನ ಸದ್ದು ಕೇಳಿಸುವುದೇ ಎಂದು ಹುಡುಕಿದ. ಕಿವಿಗಳ ಎರಡೂ ಅಂಗೈಯಲ್ಲಿ ಮುಚ್ಚಿ ಮುಚ್ಚಿ ಬಿಟ್ಟು ಬಿಟ್ಟು ದನಿಯ ಆಲಿಸಿದ. ಆ ಮಳೆಯೇ ರೋದಿಸುತ್ತಿರುವಂತೆ ಭಾಸವಾಯಿತು. ಮುಳ್ಳುತಂತಿಗೆ ಸಿಲುಕಿದ್ದ ಆ ಯಾವ ಹೆಣ್ಣುಮಗಳ ರವಿಕೆಯೋ ವಿಧವೆಯ ಹರಿದ ತುಂಡು ಬಟ್ಟೆಯೋ... ಈಗದರ ಸದ್ದಿರಲಿಲ್ಲ. ಬಿರುಗಾಳಿ ಮಳೆಗೆ ಕಿತ್ತುಕೊಂಡು ತಂತಿ ತಂತಿಗಳ ದಾಟಿ ಎಲ್ಲೋ ಹೊರಟುಹೋಗಿತ್ತು. ಮಳೆ ನಿಂತು ಜಿಟಿ ಜಿಟಿ ಜಿನುಗುತ್ತಿತ್ತು. ಎರಡು ತಾಸಿಗೂ ಹೆಚ್ಚಾಗಿ ಬಲವಾದ ಮಳೆ ಸುರಿದು ಕೊಚ್ಚಿ ಹರಿದಿತ್ತು. ಸದ್ಯ ಆ ಅಳಲಿಗೆ ಮುಕ್ತಿ ಸಿಕ್ಕಿತೇನೊ?

'ಓಹೋಯ್ ತಾಯೇ, ಮಗಳೇ, ನನಗೆ ಗೊತ್ತಿಲ್ಲದ ಹೆಂಗಸೇ... ನಿನ್ನ ಅಳಲ ದನಿ ಮಾತ್ರ ಈಗಲೂ ನನ್ನೆದೆಯಲ್ಲಿ, ಧಮನಿಯಲ್ಲಿ ಮಿಡಿಯುತ್ತಿದೆ. ನಿನ್ನ ಮುಖವನ್ನೊಮ್ಮೆ ನೋಡಬೇಕಿತ್ತು. ಅಂತೂ ಸದ್ದಡಗಿತಲ್ಲ... ಒಳಿತಾಗಲಿ ನಿನಗೆ' ಎಂದು ಹರಿವ ನೀರ ಕೊರಕಲ ದಾಟಿ ದಿಕ್ಕು ಕಾಣದೇ... ಟಾರ್ಚ್ ಕೈ ಜಾರಿ ಬಿದ್ದುಹೋಗಿ ಆಲಿಕಲ್ಲು ಮಳೆಯ ಚಳಿಗೆ ನಡುಗುತ್ತ, ಹೂತುಹೋಗುವ ಕಾಲುಗಳ ಬಲವಾಗಿ ಎತ್ತಿ ಹಾಕುತ್ತ... ಇಲ್ಲಿ ಗಟ್ಟಿ ನೆಲವಿದೆ ಎಂದು ಉರುಳಿಬಿದ್ದಿದ್ದ ವಿದ್ಯುತ್ ಕಂಬವ ಹಿಡಿದು; ಆ ಕಡೆ ಹೋಗಿ ಬಿಡುವ ಎಂದು ಮುಂದೆ ಹೋದಂತೆಯೇ ಜಾರಿದ. ಅವನ ಮುಂದೆಯೇ ಜೀವಂತ ವಿದ್ಯುತ್ ತಂತಿ ಆಸರೆಯ ಕೈ ನೀಡುವಂತೆ ಕ್ಷಣ ಮಾತ್ರದಲ್ಲಿ ಅವನನ್ನು ಹಿಡಿದು ಹೀರಿಕೊಂಡಿತು. ಹತ್ತಾರು ವಿದ್ಯುತ್ ಕಂಬಗಳು ಮಳೆಗಾಳಿಗೆ ಉರುಳಿಬಿದ್ದಿದ್ದವು.

ಅವನ ಸದ್ದಿರಲಿಲ್ಲ. ಅಲ್ಲೆಲ್ಲೋ ಮಿಂಚು ಮಾಯೆ ಗುಡುಗು ತಮಗೆ ಏನೂ ಗೊತ್ತಿಲ್ಲ ಎಂಬಂತೆ ದೂರ ಸರಿದಿದ್ದವು. ಯಃಕಶ್ಚಿತ್ ಜೀವ ಒಮ್ಮೊಮ್ಮೆ ಎಷ್ಟೊಂದು ದುಬಾರಿ... ಹಾಗೆಯೇ ಎಷ್ಟೊಂದು ಅನಾಮಿಕ ಜೀವ... ಸಾವಿರಾರು ಎಕರೆಗಳ ಆ ಬಟಾಬಯಲು ಗಸ್ತಿನವರಿಗೆ ತಂತಿ ಹಿಡಿದು ನೆಲಕಚ್ಚಿ ಮಲಗಿದ್ದ ಆ ಅಮಾಯಕನ ಶವ ಕಂಡಿತು. ರಿಯಲ್ ಎಸ್ಟೇಟ್ ದಂಧೆಯವರಿಗೆ ಅದನ್ನು ಮುಚ್ಚಿಹಾಕಲು ಚಿಲ್ಲರೆ ಕಾಸು ಸಾಕಾಗಿತ್ತು. ಯಾರಿಗೂ ಆತ ಏನಾದ ಎಂಬುದೇ ಗೊತ್ತಾಗಲಿಲ್ಲ. ಸಂಸಾರವೇ ತನಗೆ ವಿರಸ ಎಂದೆನ್ನುತ್ತ ನೋಯುತ್ತಿದ್ದ. ಸನ್ಯಾಸಿ ಆಗಲು ಹಿಮಾಲಯಕ್ಕೆ ಹೋಗುವೆ ಎನ್ನುತ್ತಿದ್ದ. ಹಾಗೇ ಹಿಮಾಲಯ ಸೇರಿ; ಅಲ್ಲಿ ಆ ನೀಲಕಂಠ ಶಿವನ ಜೊತೆ ಕುಡಿದು ಧ್ಯಾನದಲ್ಲಿ ಮಲಗಿರುವೆಯಾ ಎಂದು ಅವನ ಸಹೋದ್ಯೋಗಿ ಕುಡುಕ ಗೆಳೆಯನಿಗಾಗಿ ತುಂಬಾ ಹುಡುಕಾಡುತ್ತಿದ್ದ. ಯಾವ ಪತ್ತೆಯೂ ಆಗಿರಲಿಲ್ಲ. ನಗರ ಕೊಬ್ಬಿದ ಮೋಹದ ಕುದುರೆಯಂತೆ ಓಡುತ್ತಿತ್ತು. ಅಸಾಧ್ಯ ಭಾರವ ಎಳೆವ ಗೂಡ್ಸ್ ಗಾಡಿಗಳು ರೈಲು ದಾರಿಯಲ್ಲಿ ಬಂದು ಆ ಗಣಿ ನಿಲ್ದಾಣದಲ್ಲಿ ನಿಲ್ಲುವಾಗ ಅಸಾಧ್ಯ ಬ್ರೇಕಿನ ಸದ್ದು ಮಾಡಿ ಕಿರಿಚಿಕೊಂಡು ಬಂದು ವಿಪರೀತ ಉಸ್ಸೆಂದು ನಿಟ್ಟುಸಿರು ಬಿಟ್ಟು ನಿಲ್ಲುತ್ತಿದ್ದವು.

ಆರು ತಿಂಗಳಾದರೂ ಬರಲಿಲ್ಲ ಎಂದು ಆ ಸಭ್ಯನ ಮನೆ ವಿಳಾಸ ಹುಡುಕಿ, 'ಅಕ್ಕಾರೇ... ಸಾರ್ ಆಫೀಸಿಗೇ ಬರುತ್ತಿಲ್ಲ. ಎಲ್ಲ ಕಡೆ ವಿಚಾರಿಸಿ ಹುಡುಕಿದೆ... ಬಹಳ ದುಃಖವಾಗುತ್ತೆ ಅಕ್ಕಾರೇ... ಅವರಿಲ್ಲದ ಕಚೇರಿಯಲ್ಲಿ ನನಗೆ ನೆಮ್ಮದಿಯೇ ಇಲ್ಲ...' ಎಂದು ಹೆಚ್ಚುವರಿ ಪತ್ತೆಗೆ ವಿವರ ಕೇಳಿದ್ದ. ನಿರ್ದಯವಾಗಿ 'ನಡೆ, ಆಚೆ' ಎಂದಿದ್ದಳು. ಆ ಕುಡುಕ ಹೆದರಿ ಹೊರಟು ಹೋಗಿದ್ದ.

'ಎಲ್ಲಿ ಹೋಗಿ ಸಾಯ್ತಾನೆ ಅವನು ಜೀವ ತಿನ್ನುವ ಗಂಡ... ನನ್ನ ತಿಂದು ಸಾಯಿಸಿಯೇ ಅವನು ಸಾಯುವುದು... ಅವನ ಮಗಳೂ ಮೋಸ ಮಾಡಿದಳು' ಎಂದು ಕೂಗಾಡಿದ್ದಳು. 'ಆ ಪಾಪಿ ಎಲ್ಲಿ ಹೋದರೂ ಅವನಿಗೆ ಸಾವಿಲ್ಲ... ಆ ಪಾಪಿ ನನ್ನ ಕೊಂದೇ ಸಾಯಬೇಕಿರುವುದು... ನಾನು ಕೊಲ್ಲಲಾಗದಲ್ಲ... ಹೆತ್ತ ಕರುಳು; ಮಲಗಿಸಿಕೊಂಡ ಒಡಲು' ಎಂದು ಸಂಕಟದಲ್ಲಿದ್ದಳು. ಅವಳ ಕರುಳು ಈಗ ಯಾವುದೋ ತಂತಿಬೇಲಿಯ ಮುಳ್ಳಿಗೆ ಸಿಲುಕಿದಂತಾಗಿ ನರಳುತ್ತಿದ್ದಳು.

ನಗರಗಳು ಭಾವನೆಗಳ ಸಮಾಧಿಗಳ ಮೇಲೆ ಬೆಳೆಯುತ್ತಲೇ ಇರುತ್ತವೆ. ಆ ಹರಪ್ಪಾ, ಮೊಹೆಂಜೊದಾರೊ, ಮೆಸಪಟೋಮಿಯಾ, ಈಜಿಪ್ಟ್‌ನ ಪಿರಮಿಡ್ ನಗರಗಳು ಈಗ ಏನೇನೊ ಆಗಿವೆ... ಒಂದು ಮುಳ್ಳುತಂತಿಗೆ ಸಿಲುಕಿ 'ಅಣ್ಣಾ' ಎಂದು ವಿಮೋಚನೆಗಾಗಿ ಕರೆದದ್ದು ಯಾವ ಲೆಕ್ಕ... ನಿಸರ್ಗ ಎಲ್ಲವನ್ನೂ ತನಗೆ ಬೇಕಾದಂತೆ ಸರಿಮಾಡಿಕೊಳ್ಳುತ್ತದೆ ಎಂದು ಗಾಳಿ ಜೋರಾಗಿ ಬೀಸಿತ್ತು. 'ಬರಲಿ ಬರಲೀ ಅವನೂ... ಸುಮ್ಮನೆ ಬಿಟ್ಟು ಬಿಡುವೆನೇ... ನನ್ನ ಬಿಟ್ಟು ಎಲ್ಲಿ ಹೋಯ್ತದೆ ಆ ಪ್ರಾಣಿ... ಸರಿಯಾದ ಬುದ್ಧಿ ಕಲಿಸದೆ ಬಿಡುವೆನೇ...' ಎಂದು ಆತನ ಮಡದಿ ಕಾಯುತ್ತಲೇ ಇದ್ದಳು.

ಕಾಲ ಕಳೆದುಹೋಗಿತ್ತು. ಆ ನಗರದ ಹೊಸ ವಲಯದಲ್ಲಿ ತರಾವರಿ ಸಂಸಾರಗಳ ಮನೆಗಳು ಮೇಲೆದ್ದಿದ್ದವು. 'ಅಲ್ಲೆಲ್ಲಾದರೂ ಒಂದು ಸೈಟು ಖರೀದಿಸು ಎಂದು ಎದೆ ಚಚ್ಚಿಕೊಂಡು ಜಗಳ ಮಾಡಿದ್ದೆ. ಅದನ್ನೂ ಮಾಡದೆ ಮೋಸ ಮಾಡಿದ... ಮುದುಕನಾದಾಗ ಬರ್ತಾನ... ನಡೀ ನಡೀ ಸ್ಮಶಾನಕ್ಕೆ ಹೋಗುವ ಎಂದು ಕೈ ಹಿಡಿದು ನಡೆವೆ' ಎಂದು ಏಕಾಂತ ನರಕದಲ್ಲಿ ಚಡಪಡಿಸುತ್ತಿದ್ದಳು. ಅವನು ಬರಲುಂಟೇ? ಯಾರ ಜಪ್ತಿಗೂ ಸಿಗದಂತೆ ಮಾಯವಾಗಿದ್ದ.

■